# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 456(566) |
| 2. | ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 14.08.2025 |
| 4. | ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಬೃಹತ್, ಮಧ್ಯಮ ಹಾಗೂ ಸಣ್ಣ ಗಾತ್ರದ ಅಣೆಕಟ್ಟುಗಳಿವೆ; ಅವುಗಳನ್ನು ಯಾವಾಗ ನಿರ್ಮಿಸಲಾಗಿತ್ತು ಮತ್ತು ಅವುಗಳ (ಲೈಫ್ ಸ್ಪ್ಯಾನ್) ಜೀವಿತಾವಧಿ ಎಷ್ಟು; | ಕೇಂದ್ರ ಜಲ ಆಯೋಗ, ನವದೆಹಲಿಯಿಂದ ಪ್ರಕಟಿಸಿರುವ ನಿರ್ದಿಷ್ಟ ಪಡಿಸಿದ ಅಣೆಕಟ್ಟುಗಳ ರಾಷ್ಟ್ರೀಯ ನೋಂದಣಿ ದಾಖಲೆ-2025 (National Register of specified Dams 2025) ರ ಪ್ರಕಾರ 231 ನಿರ್ದಿಷ್ಟ ಪಡಿಸಿದ ಅಣೆಕಟ್ಟುಗಳ ಪೈಕಿ ಜಲಸಂಪನ್ಮೂಲ ಇಲಾಖೆಯಡಿಯಲ್ಲಿ 73 ನಿರ್ದಿಷ್ಟ ಪಡಿಸಿದ ಅಣೆಕಟ್ಟುಗಳು (Specified dams as per definition in Dam Safety Act 2021) ಇರುತ್ತವೆ. ಅಣೆಕಟ್ಟುಗಳು ನಿರ್ಮಿತವಾದ ವರ್ಷದ ಕುರಿತಾದ ಮಾಹಿತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.<br><br>ಸಾಮಾನ್ಯವಾಗಿ ಅಣೆಕಟ್ಟುಗಳನ್ನು ವಿನ್ಯಾಸ ಮಾಡುವಾಗ, 75 ರಿಂದ 100 ವರ್ಷಗಳ ಜೀವಿತಾವಧಿಯನ್ನು ಪರಿಗಣಿಸಲಾಗುತ್ತದೆ. |
| (ಆ) | ರಾಜ್ಯದ ಅಣೆಕಟ್ಟುಗಳ ಒಟ್ಟು ಸ್ಥಾಪಿತ (ಇನ್‌ಸ್ಟಾಲ್ಡ್ ಕೆಪಾಸಿಟಿ) ಸಾಮರ್ಥ್ಯವೆಷ್ಟು; ಹೂಳು ತುಂಬಿರುವ ಕಾರಣ ಕಡಿಮೆಯಾಗಿರುವ ಸಾಮರ್ಥ್ಯವನ್ನು ಪರಿಶೀಲಿಸಲಾಗಿದೆಯೇ; ಹೂಳಿನಿಂದಾಗಿ ಪ್ರಸ್ತುತ ಎಷ್ಟು ಅಣೆಕಟ್ಟುಗಳ ಸಾಮರ್ಥ್ಯ ಎಷ್ಟು ಪ್ರತಿಶತ ಕಡಿಮೆಯಾಗಿದೆ; | ಅಣೆಕಟ್ಟುಗಳ ಒಟ್ಟು ಸ್ಥಾಪಿತ (ಇನ್‌ಸ್ಟಾಲ್ಡ್ ಕೆಪಾಸಿಟಿ) ಸಾಮರ್ಥ್ಯದ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. ಹಾಗೂ ಹೂಳು ತುಂಬಿರುವ ಕುರಿತು ಸರ್ವೆ ಕಾರ್ಯವನ್ನು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣ ರಾಜಸಾಗರ ಸಂಸ್ಥೆಯ ವತಿಯಿಂದ ಕೈಗೊಂಡಿದ್ದು, ಹೂಳಿನಿಂದಾಗಿ ಪ್ರಸ್ತುತ ಅಣೆಕಟ್ಟುಗಳಲ್ಲಿ ಕಡಿಮೆಯಾಗಿರುವ ನೀರಿನ ಸಾಮರ್ಥ್ಯದ ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. |
| (ಇ) | ಹೆಚ್ಚು ಹೂಳು ತುಂಬಿರುವ ಅಣೆಕಟ್ಟುಗಳ ಹೂಳನ್ನು ತೆಗೆಯುವ ಬಗ್ಗೆ ಯಾವ ಕ್ರಮಗಳನ್ನು ಅನುಸರಿಸಲಾಗುತ್ತದೆ. | ಜಲಸಂಪನ್ಮೂಲ ಇಲಾಖೆಯಡಿ ಬರುವ ಅಣೆಕಟ್ಟುಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ನಾಲ್ಕು ನಿಗಮಗಳಡಿ ಕೈಗೊಂಡಿರುವ ಕ್ರಮದ ವಿವರಗಳು ಈ ಕೆಳಕಂಡಂತಿದೆ:<br><br>❖ **ಕಾವೇರಿ ನೀರಾವರಿ ನಿಗಮ ನಿಯಮಿತ:**<br>✓ **ಹಾರಂಗಿ:** "ಹಾರಂಗಿ ಜಲಾನಯನ ಪ್ರದೇಶ ಮತ್ತು ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾ ಕಾಮಗಾರಿಯ" ರೂ.130.00 ಕೋಟಿ ಮೊತ್ತದ ಕಾಮಗಾರಿಗೆ ಸರ್ಕಾರದ ದಿನಾಂಕ:19.11.2020ರ ಪತ್ರದಲ್ಲಿ ಅನುಮೋದನೆಯಾಗಿರುತ್ತದೆ. ಹಾರಂಗಿ ಅಣೆಕಟ್ಟೆಯಲ್ಲಿ ಶೇಖರಣೆಯಾಗಿರುವ ಹೂಳಿನ ಪರಿಮಾಣ ಒಟ್ಟು 1.235 ಟಿ.ಎಂ.ಸಿ ಗಳಷ್ಟಿದ್ದು, ರೂ.39.00 ಕೋಟಿ ಮೊತ್ತದಲ್ಲಿ 0.031 ಟಿ.ಎಂ.ಸಿ ಹೂಳನ್ನು ಜಲಾಶಯದ ಹಿಂಭಾಗದಲ್ಲಿ ಬರುವ confluence point ನಲ್ಲಿ ತೆಗೆಯಲು ಸದರಿ ಅಂದಾಜಿನಲ್ಲಿ ಒಳಗೊಂಡಿರುತ್ತದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | ❖ **ಕರ್ನಾಟಕ ನೀರಾವರಿ ನಿಗಮ ನಿಯಮಿತ:**<br>✓ **ತುಂಗಭದ್ರಾ**: ಈ ಜಲಾಶಯದಲ್ಲಿ ಸಂಗ್ರಹವಾಗಿರುವ 26.68 TMC ಹೂಳು ತೆಗೆಯುವ ರೂ.13,695.00 ಕೋಟಿ ಮೊತ್ತದ ಪ್ರಸ್ತಾವನೆಯನ್ನು PMKSY-HKKP-RRR ಯೋಜನೆ ಅಡಿಯಲ್ಲಿ ಕೈಗೊಳ್ಳಲು ಸರ್ಕಾರದ ದಿನಾಂಕ:26.06.2024 ರ ಪತ್ರದಲ್ಲಿ ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿತ್ತು. ಮುಂದುವರೆದು, ಪ್ರಸ್ತಾವನೆಯನ್ನು ಪರಿಗಣಿಸಲು ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ದಿನಾಂಕ:08.08.2024 ರ ಪತ್ರದಲ್ಲಿ ಕೋರಲಾಗಿದೆ.<br><br>❖ **ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ:**<br>✓ ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳಲ್ಲಿ ಪ್ರತಿ ಸಾಲಿನ ಪ್ರವಾಹ ಒಳಹರಿವಿನ ಸಂದರ್ಭದಲ್ಲಿ ಅಣೆಕಟ್ಟೆನ River Sluice ಅನ್ನು ಉಪಯೋಗಿಸಿ ಹಾಗೂ ಜಲಾನಯನ ಪ್ರದೇಶ ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಮುಖೇನ ಹೂಳಿನ ಮಟ್ಟವನ್ನು ನಿಯಂತ್ರಣಗೊಳಿಸಲಾಗುತ್ತಿದೆ.<br><br>❖ **ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ:**<br>✓ ವಿ.ವಿ.ಸಾಗರ ಜಲಾಶಯದಲ್ಲಿ ಒಟ್ಟು 115 ವರ್ಷಗಳಲ್ಲಿ ಶೇಖರಣೆಯಾಗಿರುವ ಹೂಳಿನ ಪ್ರಮಾಣ 0.58 ಟಿ.ಎಂ.ಸಿ ಆಗಿರುತ್ತದೆ. ಸದರಿ ಹೂಳಿನ ಪ್ರಮಾಣವನ್ನು ಜಲಾಶಯದ ಗರಿಷ್ಠ ನೀರಿನ ಶೇಖರಣೆ ಪ್ರಮಾಣಕ್ಕೆ (30.422 ಟಿ.ಎಂ.ಸಿ) ಹೋಲಿಸಿದಾಗ 1.90% ರಷ್ಟು ಮಾತ್ರ ಆಗಿರುತ್ತದೆ. ಈ ಪ್ರಮಾಣದಿಂದಾಗಿ ನೀರಿನ ಬಳಕೆ ಪ್ರಮಾಣದಲ್ಲಿ ಯಾವುದೇ ರೀತಿಯ ತೊಂದರೆಗಳಿಲ್ಲದ ಕಾರಣ, ಹೂಳು ತೆಗೆಯಲು ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ.<br><br>✓ ಗಾಯತ್ರಿ ಜಲಾಶಯವನ್ನು ನಿರ್ಮಿಸಿ 62 ವರ್ಷಗಳು ಕಳೆದಿದ್ದು, ಗಾಯತ್ರಿ ಜಲಾಶಯದ ಹೂಳು ತುಂಬಿರುವ ಕುರಿತು ಸರ್ವೇ ಕಾರ್ಯ ಕೈಗೊಳ್ಳಲು ಕ್ರಮ ಜರುಗಿಸಲಾಗುತ್ತಿದೆ. |
| **(ಈ)** | ಅಣೆಕಟ್ಟುಗಳ ಕ್ರೈಸ್ಟ್ ಗೇಟುಗಳು, ಕಾಲುವೆಗಳು ಮತ್ತಿತರ ಯಾವುದೇ ಪರಿಕರಗಳ ಸುರಕ್ಷತೆಯನ್ನು ಖಾತರಿ ಪಡಿಸಲಾಗುತ್ತಿದೆಯೇ: ಹಳೆಯದಾದ ಅಣೆಕಟ್ಟುಗಳಲ್ಲಿ ನೀರು ಕಡಿಮೆ ಇರುವ ಸಂದರ್ಭದಲ್ಲಿ ಹೂಳು ತೆಗೆಯುವ, ಕ್ರೈಸ್ಟ್ ಗೇಟುಗಳನ್ನು ಉನ್ನತೀ ಕರಿಸುವ ಬಗ್ಗೆ ಸರಕಾರ ಯೋಚಿಸಿದೆಯೇ: | ಅಣೆಕಟ್ಟುಗಳ ಕ್ರಸ್ಟ್ ಗೇಟುಗಳು, ಕಾಲುವೆಗಳು ಮತ್ತಿತರ ಯಾವುದೇ ಪರಿಕರಗಳ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು, ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಕಾಯ್ದೆ-2021ರ ಅಧ್ಯಾಯ VII, ಸೆಕ್ಷನ್ 31(1) ರನ್ವಯ, ರಾಜ್ಯದ ಅಣೆಕಟ್ಟುಗಳ ಸುರಕ್ಷತಾ ಹಿತದೃಷ್ಟಿಯಿಂದ ಸಂಬಂಧಿಸಿದ ಯೋಜನಾಧಿಕಾರಿಗಳು ವಾರ್ಷಿಕವಾಗಿ ಕೇಂದ್ರ ಜಲ ಆಯೋಗದ ಮಾರ್ಗಸೂಚಿಯನ್ವಯ ಮುಂಗಾರು ಪೂರ್ವ ಹಾಗೂ ಉತ್ತರ ಮುಂಗಾರು ಪರಿವೀಕ್ಷಣೆಗಳನ್ನು ಕೈಗೊಂಡು, Health Status ವರದಿಯನ್ನು ರಾಜ್ಯ ಅಣೆಕಟ್ಟು ಸುರಕ್ಷತಾ ಸಂಸ್ಥೆಗೆ (SDSO) ಹಾಗೂ ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರ, ನವದೆಹಲಿ (NDSA) ರವರಿಗೆ Dam Health Rehabilitation and Monitoring Application (DHARMA) Portal ಮೂಲಕ ನಿಗದಿತ ಕಾಲಾವಧಿಯೊಳಗೆ ಸಲ್ಲಿಸಲಾಗುತ್ತಿದೆ. |

| | | |
|---|---|---|
| | | ಇದಲ್ಲದೆ, ಅಣೆಕಟ್ಟು ಸುರಕ್ಷತಾ ಸಂಸ್ಥೆಯಡಿ ಸರ್ಕಾರದಿಂದ ರಚಿಸಲಾಗಿರುವ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿಯಿಂದ **(DSRP)** ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಅಣೆಕಟ್ಟುಗಳನ್ನು ಮತ್ತು ಅಣೆಕಟ್ಟು ಸುರಕ್ಷತಾ ಪರಿಶೀಲನಾ ತಂಡಗಳಿಂದ **(DSRT)** ಉಳಿದ ಅಣೆಕಟ್ಟುಗಳನ್ನು ಕೇಂದ್ರ ಜಲ ಆಯೋಗದ ಮಾರ್ಗಸೂಚಿಗಳಂತೆ ಪರಿವೀಕ್ಷಣೆ ಕೈಗೊಳ್ಳಲಾಗುತ್ತಿದೆ. ಸಮಿತಿ/ ತಂಡಗಳ ಪರಿವೀಕ್ಷಣೆಯ ಶಿಫಾರಸ್ಸು/ಸಲಹೆಗಳಂತೆ ಸಂಬಂಧಪಟ್ಟ ಅಣೆಕಟ್ಟು ವಾರಸುದಾರರು ಅಣೆಕಟ್ಟುಗಳ ಸುರಕ್ಷತೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಾರೆ.<br><br>ಮೇಲಿನ ಸಮಿತಿ/ತಂಡಗಳು ಹಾಗೂ ಇತರೆ ನುರಿತ ತಾಂತ್ರಿಕ ಪರಿಣಿತರು, ಅಣೆಕಟ್ಟುಗಳ ಜೀವಿತಾವಧಿಯನ್ನು ಪರಿಗಣಿಸಿ, ಅಣೆಕಟ್ಟುಗಳಲ್ಲಿ ಹೂಳು ತೆಗೆಯುವ ಹಾಗೂ ಕ್ರಸ್ಟ್ ಗೇಟುಗಳನ್ನು ಉನ್ನತೀಕರಿಸುವ ಬಗ್ಗೆ ತಮ್ಮ ಪರಿವೀಕ್ಷಣಾ ವರದಿಗಳಲ್ಲಿ ಶಿಫಾರಸ್ಸು ಮಾಡಿದ್ದಲ್ಲಿ, ಅಣೆಕಟ್ಟು ವಾರಸುದಾರರು ಅಗತ್ಯ ಕ್ರಮ ವಹಿಸುತ್ತಾರೆ. |
| **(ಉ)** | ಅಣೆಕಟ್ಟುಗಳ ನಿರ್ವಹಣೆ ಮತ್ತು ಸುರಕ್ಷತೆ ಕುರಿತ ವರದಿಯನ್ನು ತಯಾರಿಸಲು ಯಾವುದಾದರೂ ತಾಂತ್ರಿಕ ಸಂಸ್ಥೆಯನ್ನು ಸರಕಾರ ಗೊತ್ತುಪಡಿಸಿದೆಯೇ: ಈ ಕುರಿತು ಸರಕಾರದ ನಿಲುವೇನು? | ಅಣೆಕಟ್ಟುಗಳ ನಿರ್ವಹಣೆ ಮತ್ತು ಸುರಕ್ಷತೆ ಕುರಿತ ವರದಿಯನ್ನು ತಯಾರಿಸಲು ಇಲ್ಲಿಯವರೆಗೂ ಯಾವುದೇ ತಾಂತ್ರಿಕ ಸಂಸ್ಥೆಯನ್ನು ಗೊತ್ತುಪಡಿಸಲಾಗಿರುವುದಿಲ್ಲ.<br><br>ಆದರೆ, ಅಣೆಕಟ್ಟು ಸುರಕ್ಷತಾ ಕಾಯ್ದೆ-2021 ರ ಪ್ರಕಾರ, ನಿರ್ದಿಷ್ಟ ಪಡಿಸಿದ ಅಣೆಕಟ್ಟುಗಳ ಸುರಕ್ಷತಾ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ, ಮುಖ್ಯ ಇಂಜಿನಿಯರ್ ರವರು ಮುಖ್ಯಸ್ಥರಾಗಿರುವ, ಕೇಂದ್ರ ಸ್ಥಾನ ಬೆಂಗಳೂರಿನಲ್ಲಿ ಹೊಂದಿರುವ, ರಾಜ್ಯ ಅಣೆಕಟ್ಟು ಸುರಕ್ಷತಾ ಸಂಸ್ಥೆಯನ್ನು ದಿನಾಂಕ:10.01.2022 ರ ಆದೇಶದನ್ವಯ ಹೊಸದಾಗಿ ಸ್ಥಾಪಿಸಲಾಗಿರುತ್ತದೆ.<br><br>ಅಣೆಕಟ್ಟು ಸುರಕ್ಷತಾ ಸಂಸ್ಥೆಯಡಿ ರಚಿಸಲಾಗಿರುವ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿ**(DSRP)** ಮತ್ತು ಅಣೆಕಟ್ಟು ಸುರಕ್ಷತಾ ಪರಿಶೀಲನಾ ತಂಡಗಳು **(DSRT)** ಕೇಂದ್ರ ಜಲ ಆಯೋಗದ ಮಾರ್ಗಸೂಚಿಗಳನ್ವಯ ಅಣೆಕಟ್ಟುಗಳ ಪರಿವೀಕ್ಷಣೆ ಕೈಗೊಳ್ಳುವ, ಸದರಿ ಸಮಿತಿ/ ತಂಡಗಳ ಪರಿವೀಕ್ಷಣೆಯ ಶಿಫಾರಸ್ಸು/ಸಲಹೆಗಳಂತೆ ಸಂಬಂಧಪಟ್ಟ ಅಣೆಕಟ್ಟು ವಾರಸುದಾರರು ಅಣೆಕಟ್ಟುಗಳ ಸುರಕ್ಷತೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಾರೆ.<br><br>ಅಣೆಕಟ್ಟು ಸುರಕ್ಷತಾ ಕಾಯ್ದೆ- 2021 ಯ ಪ್ರಕಾರ ನಿಬಂಧನೆಗಳನ್ನು ಕಾರ್ಯಗತಗೊಳಿಸಲು ಅಣೆಕಟ್ಟಿನ ವಾರಸುದಾರರೊಂದಿಗೆ ಮೇಲ್ವಿಚಾರಣೆ ಮತ್ತು ಸಮನ್ವಯವನ್ನು ಅಣೆಕಟ್ಟು ಸುರಕ್ಷತಾ ಸಂಸ್ಥೆಯು ಮಾಡುತ್ತದೆ. |

**ಇ.ಸಂಖ್ಯೆ: ಜಸಂಇ 89 ಡಿಎಸ್ ಪಿ 2025**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯ ಮಂತ್ರಿಗಳು

**ಅನುಬಂಧ-1**

| ಕ್ರಮ ಸಂಖ್ಯೆ | ಅಣೆಕಟ್ಟಿನ ಹೆಸರು | ಕಾರ್ಯಚರಣೆ ಮತ್ತು ನಿರ್ವಹಣಾ ಪ್ರಾಧಿಕಾರ | ನಿರ್ಮಾಣ ವರ್ಷ | ನೀರಿನ ಸಂಗ್ರಹ ಸಾಮರ್ಥ್ಯ (TMC) |
|---|---|---|---|---|
| 1 | ಅಹೇರಿ ಜಂಬಗಿ | ಸ.ನೀ | 1989 | 0.06 |
| 2 | ಐಗಳಿ ಕೆರೆ | ಸ.ನೀ | 1969 | 0.04 |
| 3 | ಅಲಗಾಪುರ ಕೆರೆ | ಸ.ನೀ | 1978 | 0.05 |
| 4 | ಅಲಲೂರು ಕೆರೆ | ಸ.ನೀ | 1983 | 0.08 |
| 5 | ಅಲಮಟ್ಟಿ ಅಣೆಕಟ್ಟು | ಜಸಂಇ | 2000 | 123.07 |
| 6 | ಅಮರ್ಜಾ ಅಣೆಕಟ್ಟು | ಜಸಂಇ | 2001 | 1.55 |
| 7 | ಅಂಬಡಗಾ ಕೆರೆ | ಸ.ನೀ | 1972 | 0.03 |
| 8 | ಅಂಬ್ಲಿಗೋಳ ಕೆರೆ | ಜಸಂಇ | 1965 | 0.63 |
| 9 | ಅಂಜನಾಪುರ ಕೆರೆ | ಜಸಂಇ | 1936 | 1.83 |
| 10 | ಅಂಕಮನಹಾಳ್ ಕೆರೆ | ಸ.ನೀ | 1988 | 0.07 |
| 11 | ಅಪ್ಪೇನಹಳ್ಳಿ ಕೆರೆ | ಸ.ನೀ | 1981 | 0.06 |
| 12 | ಅರಳೀಹಳ್ಳಿ ಕೆರೆ | ಸ.ನೀ | 1983 | 0.12 |
| 13 | ಅರಬೆಂಚಿ ಕೆರೆ | ಜಸಂಇ | 1982 | 0.06 |
| 14 | ಅರಶಂಕರ್ | ಸ.ನೀ | 1957 | 0.30 |
| 15 | ಅರ್ಕಾವತಿ ಅಣೆಕಟ್ಟು | ಜಸಂಇ | 2004 | 1.59 |
| 16 | ಅಸುಂಡಿನಾಲಾ ಕೆರೆ | ಸ.ನೀ | 1989 | 0.19 |
| 17 | ಅತ್ತಿವೇರಿ ಕೆರೆ | ಸ.ನೀ | 1991 | 0.13 |
| 18 | ಬಬಲೇಶ್ವರ ಕೆರೆ | ಮುನ್ಸಿಪಲ್ ಕೌನ್ಸಿಲ್ | 1961 | 0.07 |
| 19 | ಬಚಂಕಿ ಕೆರೆ | ಸ.ನೀ | 1974 | 0.37 |
| 20 | ಬಾಲಕುಂಡಿ ಕೆರೆ | ಸ.ನೀ | 1979 | 0.26 |
| 21 | ಬಲ್ಲಾಳಸಮುದ್ರ ಕೆರೆ | ಸ.ನೀ | 1940 | 0.18 |
| 22 | ಬಸವಾಪಟ್ಟಣ | ಸ.ನೀ | 1964 | 0.05 |
| 23 | ಬಾವಲಗಾಂವ್ ಕೆರೆ | ಸ.ನೀ | 1973 | 0.07 |
| 24 | ಬೀರನಹಳ್ಳಿ ಕೆರೆ | ಸ.ನೀ | 1988 | 0.24 |
| 25 | ಬೆಲ್ಲತಸನಹಳ್ಳಕೆರೆ | ಸ.ನೀ | 1971 | 0.18 |
| 26 | ಬೆಳ್ಳಿಕಿಂಡಿ ಕೆರೆ | ಸ.ನೀ | 1972 | 0.04 |
| 27 | ಬೆಣ್ಣತೋರ ಅಣೆಕಟ್ಟು | ಜಸಂಇ | 2001 | 5.30 |
| 28 | ಭದ್ರಾ ಅಣೆಕಟ್ಟು | ಜಸಂಇ | 1962 | 71.54 |
| 29 | ಬೈರಾಪುರ ಕೆರೆ | ಸ.ನೀ | 1991 | 0.04 |
| 30 | ಭರಮಸಾಗರ ದೊಡ್ಡಕೆರೆ | ಸ.ನೀ | 1902 | 0.14 |
| 31 | ಭರತಗಿ ಕೆರೆ | ಸ.ನೀ | 1975 | 0.10 |
| 32 | ಭೀಮಸಮುದ್ರ ಅಣೆಕಟ್ಟು | ಜಸಂಇ | 1903 | 0.90 |
| 33 | ಭೀಮ ಏ.ನೀ | ಜಸಂಇ | 2010 | 3.17 |
| 34 | ಬೋಪಾಳ್ಗೋಡ್ ಬೆಳ್ಳೊಣ | ಸ.ನೀ | 1988 | 0.13 |
| 35 | ಬೀಡೀ ಕೆರೆ | ಸ.ನೀ | 1989 | 0.04 |
| 36 | ಬೊಮ್ಮನಹಳ್ಳಿ ಪಿಕಪ್ | ಕೆ.ಪಿ.ಸಿ.ಎಲ್ | 1979 | 3.42 |
| 37 | ಬೊಮ್ಮನಹಳ್ಳಿ ಕೆರೆ | ಸ.ನೀ | 1981 | 0.09 |

| | | | | |
|---|---|---|---|---|
| 38 | ಬೂದಿಕೆರೆ | ಸ.ನೀ | 1950 | 0.05 |
| 39 | ಬೋರನಕನಿವೆ ಕೆರೆ | ಸ.ನೀ | 1892 | 2.42 |
| 40 | ಬುಕ್ಕಾಂಬುದಿ ದೊಡ್ಡಕೆರೆ | ಸ.ನೀ | 1903 | 0.31 |
| 41 | ಬುಕ್ಕಾಪಟ್ಟಣ ಕೆರೆ | ಸ.ನೀ | 1903 | 0.13 |
| 42 | ಬುಳ್ಳಾಪುರ ಕೆರೆ | ಸ.ನೀ | 1952 | 0.03 |
| 43 | ಬೈರಮಂಗಲ ಕೆರೆ | ಸ.ನೀ | 1943 | 0.85 |
| 44 | ಚಕೆನಾ ಹಳ್ಳಿ ಕೆರೆ | ಸ.ನೀ | 1970 | 0.15 |
| 45 | ಚಕ್ರ ಅಣೆಕಟ್ಟು | ಕೆ.ಪಿ.ಸಿ.ಎಲ್ | 1985 | 7.86 |
| 46 | ಚಂದ್ರಂಪಳ್ಳಿ ಅಣೆಕಟ್ಟು | ಜಸಂಇ | 1973 | 1.21 |
| 47 | ಚಾಂಗ್ಲೀಯಾರ್ ಕೆರೆ | ಸ.ನೀ | 1988 | 0.06 |
| 48 | ಚಿಕ್ಲಿಹೊಳೆ ಅಣೆಕಟ್ಟು | ಜಸಂಇ | 1985 | 0.18 |
| 49 | ಚಿಗಳ್ಳಿ ಕೆರೆ | ಸ.ನೀ | 1974 | 0.29 |
| 50 | ಚಿಕ್ಕಗೊಂಡನಹಳ್ಳಿ ಕೆರೆ | ಸ.ನೀ | 1978 | 0.09 |
| 51 | ಚಿಕ್ಕಹೊಳೆ | ಜಸಂಇ | 1984 | 0.38 |
| 52 | ಚಿಕ್ಕಲಿಂಗದಹಳ್ಳಿ | ಸ.ನೀ | 1988 | 0.15 |
| 53 | ಚಿಕ್ಕಂಗಾಂವ್ ಕೆರೆ | ಸ.ನೀ | 1981 | 0.03 |
| 54 | ಚಿತ್ರವಾಡಗಿ ಕೆರೆ | ಸ.ನೀ | 1971 | 0.20 |
| 55 | ಚುಲಕಿನಾಲಾ ಅಣೆಕಟ್ಟು | ಜಸಂಇ | 1997 | 0.94 |
| 56 | ದಂಡಿಗಾನಹಳ್ಳಿ ಕೆರೆ | ಸ.ನೀ | 1987 | 0.11 |
| 57 | ದಾಸನಹಳ್ಳಿ ಕೆರೆ | ಸ.ನೀ | 1986 | 0.05 |
| 58 | ದೀಪಾಂಬುಡಿಕೆರೆ ಕೆರೆ | ಸ.ನೀ | 1906 | 0.38 |
| 59 | ದೇವರಬಿಳಿಕೆರೆ | ಜಸಂಇ | 1985 | 0.19 |
| 60 | ದೇವರಮರಡೀಕೆರೆ | ಸ.ನೀ | 1970 | 0.05 |
| 61 | ಧರ್ಮ ಜಲಾಶಯ | ಜಸಂಇ | 1964 | 0.81 |
| 62 | ದಿನ್ನಿ ಕೆರೆ | ಸ.ನೀ | 1986 | 0.01 |
| 63 | ದೊಡ್ಡಲದಹಳ್ಳಿ ಕೆರೆ | ಸ.ನೀ | 1934 | 0.15 |
| 64 | ದುರ್ಗದಹಳ್ಳಿ ಕೆರೆ | ಸ.ನೀ | 1991 | 0.19 |
| 65 | ಏಕಾಂಬ ಕೆರೆ | ಸ.ನೀ | 1979 | 0.07 |
| 66 | ಎಕ್ಕುಂಡಿ ಕೆರೆ | ಸ.ನೀ | 1976 | 0.07 |
| 67 | ಗಂಡಬೊಮ್ಮನಹಳ್ಳಿ ಕೆರೆ | ಸ.ನೀ | 1970 | 0.24 |
| 68 | ಗಂಡೋರಿನಾಲಾ ಅಣೆಕಟ್ಟು | ಜಸಂಇ | 2001 | 1.89 |
| 69 | ಗಂಟೇನಹಳ್ಳಿ ಕೆರೆ | ಸ.ನೀ | 1981 | 0.14 |
| 70 | ಗಾಯತ್ರಿ ಜಲಾಶಯ | ಜಸಂಇ | 1963 | 0.98 |
| 71 | ಗೇರುಸೊಪ್ಪ ಅಣೆಕಟ್ಟು | ಕೆ.ಪಿ.ಸಿ.ಎಲ್ | 2000 | 4.62 |
| 72 | ಘಸ್ತೋಲಿಕೆರೆ | ಸ.ನೀ | 1970 | 0.07 |
| 73 | ಗೊಬ್ಬೂರು ಕೆರೆ | ಸ.ನೀ | 1983 | 0.11 |
| 74 | ಗೋಪಿನಾಥಂ ಕೆರೆ | ಸ.ನೀ | 1973 | 0.08 |
| 75 | ಅರಳೀಹಳ್ಳಿ ಕೆರೆ | ಸ.ನೀ | 1983 | 0.11 |
| 76 | ಗುಂಡಾಲ್ ಅಣೆಕಟ್ಟು | ಜಸಂಇ | 1980 | 0.97 |
| 77 | ಗುಂಡ್ವಾನ್ ಕೆರೆ ಸೈಟ್-೧ | ಸ.ನೀ | 1979 | 0.08 |
| 78 | ಸೈಟ್-2 ನಲ್ಲಿ ಗುಂಡ್ವಾನ್ ಟ್ಯಾಂಕ್ | ಸ.ನೀ | 1962 | 0.06 |
| 79 | ಎಚ್.ಬಿ.ಹಳ್ಳಿ ಪಿಕಪ್ | ಜಸಂಇ | 1972 | 2.00 |
| 80 | ಐಹೊಳೆ | ಜಸಂಇ | 1979 | 0.18 |
| 81 | ಹಾಲುದ್ಯಾಮನಹಳ್ಳಿ ಕೆರೆ | ಸ.ನೀ | 1976 | 0.04 |
| 82 | ಹಣಜಗಿ ಕೆರೆ | ಸ.ನೀ | 1968 | 0.05 |

| | | | | |
|---|---|---|---|---|
| 83 | ಹಣುಮಾಪುರ ಕೆರೆ | ಸ.ನೀ | 1978 | 0.04 |
| 84 | ಹಂಚಿನಾಳ್ ಕೆರೆ | ಸ.ನೀ | 1973 | 0.06 |
| 85 | ಹಾರಂಗಿ ಅಣೆಕಟ್ಟು | ಜಸಂಇ | 1982 | 8.48 |
| 86 | ಹರಿನಾಲಾ ಅಣೆಕಟ್ಟು | ಜಸಂಇ | 2004 | 0.49 |
| 87 | ಹತ್ತಿಕುಣಿ ಅಣೆಕಟ್ಟು | ಜಸಂಇ | 1973 | 0.35 |
| 88 | ಹೆಬ್ಬಾಳ್ ಕೆರೆ | ಸ.ನೀ | 1989 | 0.02 |
| 89 | ಹೆಬ್ಬಹಳ್ಳ ಅಣೆಕಟ್ಟು | ಜಸಂಇ | 1972 | 0.42 |
| 90 | ಹೇಮಾವತಿ ಅಣೆಕಟ್ಟು | ಜಸಂಇ | 1979 | 37.10 |
| 91 | ಹೆಸರಘಟ್ಟ ಜಲಾಶಯ | ಬೆ.ನಿ.ಸ.ಓ.ಮ | 1896 | 1.10 |
| 92 | ಹಿಡಕಲ್ ಅಣೆಕಟ್ಟು | ಜಸಂಇ | 1977 | 51.01 |
| 93 | ಹಿಪ್ಪರಗಿ ಬ್ಯಾರೇಜ್ | ಜಸಂಇ | 2004 | 5.72 |
| 94 | ಹಿರೇಹಳ್ಳ ಅಣೆಕಟ್ಟು | ಜಸಂಇ | 2001 | 1.67 |
| 95 | ಹಿರೇಕಾಪ್ ಕೆರೆ | ಸ.ನೀ | 1966 | 0.05 |
| 96 | ಹಿರೇಸಂಗಗುತ್ತಿ | ಸ.ನೀ | 1993 | 0.13 |
| 97 | ಹೊಕಾರಾಣಿ ಕೆರೆ | ಸ.ನೀ | 1966 | 0.04 |
| 98 | ಹೊಂಕಾನ್ ಕೆರೆ | ಸ.ನೀ | 1974 | 0.03 |
| 99 | ಹೊಸಹಳ್ಳಿ ಕೆರೆ | ಸ.ನೀ | 1985 | 0.11 |
| 100 | ಹುಲಿಕಲ್ ಫೋರ್‌ಬೇ | ಕೆ.ಪಿ.ಸಿ.ಎಲ್ | 1989 | 0.53 |
| 101 | ಹುಲಿಕೆರೆ | ಸ.ನೀ | 1984 | 0.17 |
| 102 | ಹುಲಿಕುಂಟ ಕೆರೆ | ಸ.ನೀ | 1979 | 0.10 |
| 103 | ಇಗ್ಲೂರ್ ಅಣೆಕಟ್ಟು | ಜಸಂಇ | 1996 | 0.18 |
| 104 | ಇಟಗಿ ಕೆರೆ | ಸ.ನೀ | 1979 | 0.03 |
| 105 | ಜಂಬದಹಳ್ಳ ಅಣೆಕಟ್ಟು | ಜಸಂಇ | 1970 | 0.34 |
| 106 | ಜವಾಹರ್ ಅಣೆಕಟ್ಟು | ಮುನ್ಸಿಪಲ್ ಕೌನ್ಸಿಲ್ | 1961 | 0.06 |
| 107 | ಜಿಗಜಿಣಗಿ ಕೆರೆ | ಸ.ನೀ | 1982 | 0.14 |
| 108 | ಕೆ.ಹೊನ್ನಮಾಚನಹಳ್ಳಿ | ಜಸಂಇ | 1952 | 0.18 |
| 109 | ಕೆ.ಆರ್.ಸಾಗರ ಅಣೆಕಟ್ಟು | ಜಸಂಇ | 1932 | 49.44 |
| 110 | ಕಬಿನಿ ಅಣೆಕಟ್ಟು | ಜಸಂಇ | 1974 | 19.52 |
| 111 | ಕಚವಿನಹಳ್ಳಿ ಕೆರೆ | ಸ.ನೀ | 1978 | 0.04 |
| 112 | ಕಡಬ ಕೆರೆ | ಜಸಂಇ | 1906 | 0.58 |
| 113 | ಕಡಸಗಟ್ಟಿ ಕೆರೆ | ಸ.ನೀ | 1991 | 0.02 |
| 114 | ಕಡತನ ಬೇಗವಾಡಿ ಟ್ಯಾಂಕ್ | ಸ.ನೀ | 1965 | 0.04 |
| 115 | ಕಡತ್ನಾಳ್ ಕೆರೆ | ಸ.ನೀ | 1970 | 0.05 |
| 116 | ಕಡ್ಲೇವಾಡಿ ಕೆರೆ | ಸ.ನೀ | 1990 | 0.09 |
| 117 | ಕದ್ರ ಅಣೆಕಟ್ಟು | ಕೆ.ಪಿ.ಸಿ.ಎಲ್ | 1997 | 13.73 |
| 118 | ಕಳಸಕೊಪ್ಪ ಕೆರೆ | ಸ.ನೀ | 1960 | 0.24 |
| 119 | ಕಲ್ಕಟ್ಟೆ ಕೆರೆ | ಸ.ನೀ | 1965 | 0.10 |
| 120 | ಕಮರಹಳ್ಳಿ ಕೆರೆ | ಸ.ನೀ | 1962 | 0.10 |
| 121 | ಕನಕನಾಲಾ ಅಣೆಕಟ್ಟು | ಜಸಂಇ | 1975 | 0.22 |
| 122 | ಕಣ್ವ ಅಣೆಕಟ್ಟು | ಜಸಂಇ | 1946 | 0.81 |
| 123 | ಕಣವಿಕೆರವಿನಕೊಪ್ಪ ಕೆರೆ | ಸ.ನೀ | 1982 | 0.02 |
| 124 | ಕಾರಂಜ ಅಣೆಕಟ್ಟು | ಜಸಂಇ | 1989 | 7.69 |
| 125 | ಕರಿಮುದ್ದೇನಹಳ್ಳಿ ಕೆರೆ | ಜಸಂಇ | 1973 | 0.19 |
| 126 | ಕತ್ರಾಳ ಕೆರೆ | ಸ.ನೀ | 1979 | 0.08 |
| 127 | ಕೃಷಿಲ್ ಟ್ಯಾಂಕ್ | ಸ.ನೀ | 1964 | 0.05 |

| | | | | |
|---|---|---|---|---|
| 128 | ಕೊಡಸಹಳ್ಳಿ | ಕೆ.ಪಿ.ಸಿ.ಎಲ್ | 2000 | 10.12 |
| 129 | ಕೊಡ್ಲಿ-ಅಲ್ಲಾಪುರ್ | ಸ.ನೀ | 2000 | 0.18 |
| 130 | ಕೋಹಳ್ಳಿ ಕೆರೆ | ಸ.ನೀ | 1975 | 0.08 |
| 131 | ಕೊಟ್ಟೂರು ಕೆರೆ | ಸ.ನೀ | 1888 | 0.17 |
| 132 | ಕೌಲಿಹಳ್ಳ ಕೆರೆ | ಸ.ನೀ | 1986 | 0.02 |
| 133 | ಕುಣಿಗಲ್ ದೊಡ್ಡಕೆರೆ ಕೆರೆ | ಜಸಂಇ | 1906 | 0.53 |
| 134 | ಕುಣಿಗಲ್ ತಿಮ್ಮನಹಳ್ಳಿ | ಸ.ನೀ | 1980 | 0.08 |
| 135 | ಕುಪ್ಪಕಡ್ಡಿ ಕೆರೆ | ಸ.ನೀ | 1969 | 0.06 |
| 136 | ಕುವಳಗಿ ಅಹೇರಿ ಕೆರೆ | ಸ.ನೀ | 1981 | 0.05 |
| 137 | ಕೈರಗುಂಡ ಸ್ಯಾಡಲ್ | ಕೆ.ಪಿ.ಸಿ.ಎಲ್ | 1980 | 4.41 |
| 138 | ಲಕ್ಷ್ಮೀಸಾಗರ ಕೆರೆ | ಸ.ನೀ | 1986 | 0.24 |
| 139 | ಲಿಂಗನಮಕ್ಕಿ ಅಣೆಕಟ್ಟು | ಕೆ.ಪಿ.ಸಿ.ಎಲ್ | 1964 | 156.63 |
| 140 | ಲೋಯರ್ ಮುಲ್ಲಾಮಾರಿ ಅಣೆಕಟ | ಜಸಂಇ | 2001 | 1.74 |
| 141 | ಮದಗ ಕೆರೆ (ಹಳೆಯ) | ಸ.ನೀ | 1908 | 0.11 |
| 142 | ಮದಗ ಕೆರೆ(ಹೊಸ) | ಸ.ನೀ | 1889 | 0.38 |
| 143 | ಮಡಗಾಮಾಸೂರ್ ಕೆರೆ | ಜಸಂಇ | 1908 | 0.06 |
| 144 | ಮೈದಾಳ್ ಅಮಾನಿಕೆರೆ ಕೆರ | ಕೆ.ಐ.ಎ.ಡಿ.ಬಿ | 1906 | 0.27 |
| 145 | ಮಜ್ಜೂರ್ ಕೆರೆ | ಸ.ನೀ | 1974 | 0.23 |
| 146 | ಮಖಿನ್‌ಪುರ ಕೆರೆ | ಸ.ನೀ | 1961 | 0.09 |
| 147 | ಮಲಪ್ರಭಾ ಅಣೆಕಟ್ಟು | ಜಸಂಇ | 1972 | 37.72 |
| 148 | ಮಲ್ಲಘಟ್ಟ ಕೆರೆ | ಜಸಂಇ | 1907 | 0.65 |
| 149 | ಮಂಚನಬೆಲೆ | ಜಸಂಇ | 1993 | 1.22 |
| 150 | ಮಂಗಳ ಕೆರೆ | ಜಸಂಇ | 1969 | 0.53 |
| 151 | ಮಂಗಳ ಕೆರೆ | ಅರಣ್ಯ | 1977 | 0.19 |
| 152 | ಮಂಗಳೂರು ಕೆರೆ | ಸ.ನೀ | 1970 | 0.06 |
| 153 | ಮಣಿ | ಕೆ.ಪಿ.ಸಿ.ಎಲ್ | 1988 | 33.96 |
| 154 | ಮರಳವಾಡಿ ಅಣೆಕಟ್ಟು | ಸ.ನೀ | 1936 | 0.26 |
| 155 | ಮಾರ್ಕೋನಹಳ್ಳಿ | ಜಸಂಇ | 1940 | 2.40 |
| 156 | ಮಾರ್ಕಾಂಡೇಯ ಅಣೆಕಟ್ಟು | ಜಸಂಇ | 2006 | 3.70 |
| 157 | ಮಾರ್ಕಂಡೇಯ ಕೆರೆ | ಸ.ನೀ | 1940 | 0.21 |
| 158 | ಮಸ್ಕಿನಾಲಾ | ಜಸಂಇ | 2003 | 0.46 |
| 159 | ಮಾವತ್ತೂರು ಕೆರೆ | ಸ.ನೀ | 1900 | 0.74 |
| 160 | ಮಾವಿನಹೊಳೆ ಕೆರೆ | ಸ.ನೀ | 1969 | 0.06 |
| 161 | ಮಾಯಸಂದ್ರಕೆರೆ | ಜಸಂಇ | 1927 | 0.17 |
| 162 | ಮೆಡಿಪಲ್ಲಿ ಕೆರೆ | ಸ.ನೀ | 1971 | 0.07 |
| 163 | ಮೆಡ್ಲೇರಿ ಕೆರೆ | ಸ.ನೀ | 1903 | 0.06 |
| 164 | ಮುಚ್ಚಕಂಡಿ | ಸ.ನೀ | 1881 | 0.07 |
| 165 | ಮುಕರ್ತಿಹಾಳ್ ಕೆರೆ | ಸ.ನೀ | 1979 | 0.05 |
| 166 | ಮುಂಡವಾಡ್ ಅಣೆಕಟ್ಟು | ಸ.ನೀ | 1994 | 0.10 |
| 167 | ಮುರಕುಂಬಿ ಕೆರೆ | ಸ.ನೀ | 1970 | 0.05 |
| 168 | ಮುಸ್ತರಹಳ್ಳಿ ಕೆರೆ | ಸ.ನೀ | 1974 | 0.09 |
| 169 | ಮುತ್ತುರಾಯನಕೆರೆ | ಜಸಂಇ | 1970 | 0.24 |
| 170 | ನಾಗರನ್ ಕೆರೆ | ಸ.ನೀ | 1961 | 0.10 |
| 171 | ನಲ್ಲೂರು ಅಮಾನಿಕೆರೆ ಅಣೆಕಟ್ಟು | ಜಸಂಇ | 1987 | 0.23 |
| 172 | ನಾರಾಯಣಪುರ ಅಣೆಕಟ್ಟು | ಜಸಂಇ | 1982 | 37.65 |

| | | | | |
|---|---|---|---|---|
| 173 | ನಾರೀಹಳ್ಳ ಅಣೆಕಟ್ಟು | ಜಸಂಇ | 1981 | 0.81 |
| 174 | ನೀರಸಾಗರ ಅಣೆಕಟ್ಟು | ಕೆ.ಯು.ಡಬ್ಲ್ಯೂ.ಎಸ್&ಡಿ.ಬಿ | 1955 | 1.02 |
| 175 | ನೆಲ್ಲಿಗುಡ್ಡ ಕೆರೆ | ಸ.ನೀ | 1940 | 0.26 |
| 176 | ಅಮಚವಾಡಿ ಹೊಸಕೆರೆ | ಸ.ನೀ | 1984 | 0.06 |
| 177 | ನಿಡಸಾಲೆ ಕೆರೆ | ಸ.ನೀ | 1934 | 0.23 |
| 178 | ನಿಟ್ಟೂರು ಕೆರೆ | ಜಸಂಇ | 1906 | 0.19 |
| 179 | ನುಗು ಅಣೆಕಟ್ಟು | ಜಸಂಇ | 1959 | 5.44 |
| 180 | ಓಬೀಚೂಡನಹಳ್ಳಿ ಕೆರೆ | ಸ.ನೀ | 1989 | 0.14 |
| 181 | ಪರಶುರಾಮಪುರ ಹೊಸ ಕೆರೆ | ಸ.ನೀ | 1959 | 0.16 |
| 182 | ಪಕುರ್ತಿ ಕೆರೆ | ಸ.ನೀ | 1979 | 0.25 |
| 183 | ರಕ್ಕಸ್ಕೋಪ್ ಅಣೆಕಟ್ಟು | ಕೆ.ಯು.ಡಬ್ಲ್ಯೂ.ಎಸ್&ಡಿ.ಬಿ | 1962 | 0.59 |
| 184 | ರಾಮಲಿಂಗಾಪುರ ಕೆರೆ | ಸ.ನೀ | 1903 | 0.24 |
| 185 | ರಾಮನಹಳ್ಳಿ ಕೆರೆ | ಜಸಂಇ | 1958 | 0.51 |
| 186 | ರಾಂಪುರ ಕೆರೆ | ಸ.ನೀ | 1976 | 0.04 |
| 187 | ರಂಗಯ್ಯನದುರ್ಗ ಕೆರೆ | ಸ.ನೀ | 1986 | 0.50 |
| 188 | ರಂಗಸಮುದ್ರಕೆರೆ | ಸ.ನೀ | 1978 | 0.17 |
| 189 | ರಾಣಕೆರೆ ಕೆರೆ | ಸ.ನೀ | 1907 | 0.50 |
| 190 | ರೋಣಿಹಾಳ್ ಕೆರೆ | ಸ.ನೀ | 1979 | 0.05 |
| 191 | ಸಂಗೇನಹಳ್ಳಿ ಕೆರೆ | ಸ.ನೀ | 1952 | 0.41 |
| 192 | ಸಾರಿಗೆಹಳ್ಳಿಕೆರೆ | ಜಸಂಇ | 1903 | 0.15 |
| 193 | ಸವೇಹಕ್ಲು ಅಣೆಕಟ್ಟು | ಕೆ.ಪಿ.ಸಿ.ಎಲ್ | 1980 | 4.41 |
| 194 | ಸೀಗೆಹಳ್ಳ ಕೆರೆ | ಸ.ನೀ | 1984 | 0.11 |
| 195 | ಶೀಲವಂತನಕೊಪ್ಪ ಡಿ.ಕೆರೆ | ಜಸಂಇ | 1907 | 0.30 |
| 196 | ಸಿದ್ದಸಮುದ್ರ | ಸ.ನೀ | 1967 | 0.08 |
| 197 | ಸಿಂಗಹಳ್ಳಿ ದಳವಾಯಿ ಕೆರೆ | ಸ.ನೀ | 1906 | 0.11 |
| 198 | ಸೌಧಾಗರ್ ಅಣೆಕಟ್ಟು | ಜಸಂಇ | 1983 | 0.29 |
| 199 | ಸೌಲಂಗಾ ಕೆರೆ | ಸ.ನೀ | 1928 | 0.27 |
| 200 | ಸುಲ್ಕೋಡ್ ಕೆರೆ | ಸ.ನೀ | 1964 | 0.05 |
| 201 | ಸೂಪ ಅಣೆಕಟ್ಟು | ಕೆ.ಪಿ.ಸಿ.ಎಲ್ | 1987 | 147.55 |
| 202 | ಸುವರ್ಣಾವತಿ ಅಣೆಕಟ್ಟು | ಜಸಂಇ | 1984 | 1.26 |
| 203 | ತಡವಲ್ಲಾ ಕೆರೆ | ಸ.ನೀ | 1965 | 0.07 |
| 204 | ತಲಕಾಲ್ ಕೆರೆ | ಸ.ನೀ | 1983 | 0.06 |
| 205 | ತಲಕಲಲೆ ಅಣೆಕಟ್ಟು | ಕೆ.ಪಿ.ಸಿ.ಎಲ್ | 1964 | 4.58 |
| 206 | ತಾರಕ ಅಣೆಕಟ್ಟು | ಜಸಂಇ | 1984 | 3.92 |
| 207 | ತಟ್ಟಿಹಳ್ಳ ಅಣೆಕಟ್ಟು | ಕೆ.ಪಿ.ಸಿ.ಎಲ್ | 1979 | 9.32 |
| 208 | ತೆಗಂಪುರ ಕೆರೆ | ಸ.ನೀ | 1981 | 0.15 |
| 209 | ತೀತ ಅಣೆಕಟ್ಟು | ಜಸಂಇ | 1986 | 0.24 |
| 210 | ತಿಪ್ಪಗೊಂಡನ ಹಳ್ಳಿ | ಬೆ.ನಿ.ಸ.ಒ.ಮ | 1934 | 3.35 |
| 211 | ತೊಣ್ಣೂರು ಕೆರೆ | ಜಸಂಇ | 1000 | 0.85 |
| 212 | ತುಂಬೋಡಿ ಅಮಾನಿಕೆರೆ ಕೆರೆ | ಸ.ನೀ | 1939 | 0.15 |
| 213 | ತುರುವೇಕೆರೆ | ಜಸಂಇ | 1903 | 0.18 |
| 214 | ಉಡುತೊರೆಹಳ್ಳ ಅಣೆಕಟ್ಟು | ಜಸಂಇ | 2010 | 0.67 |
| 215 | ಅಪ್ಪರ್ ಹಿರೇನಾಲಾ ಕೆರೆ | ಸ.ನೀ | 1989 | 0.23 |

| | | | | |
|---|---|---|---|---|
| 216 | ಅಪ್ಪರ್ ಕನೇರಿ | ಕೆ.ಪಿ.ಸಿ.ಎಲ್ | 1987 | 0.58 |
| 217 | ಮುಲ್ಲಾಮರಿ ಮೇಲ್ದಂಡೆ ಅಣೆಕಟ್ಟು | ಜಸಂಇ | 1984 | 0.75 |
| 218 | ತುಂಗಾ ಮೇಲ್ದಂಡೆ ಅಣೆಕಟ್ಟು | ಜಸಂಇ | 2004 | 3.24 |
| 219 | ವಾಣಿವಿಲಾಸ ಸಾಗರ ಅಣೆಕಟ್ಟು | ಜಸಂಇ | 1907 | 30.03 |
| 220 | ವರಾಹಿ ತಿರುವು ಯೋಜನೆ | ಜಸಂಇ | 2009 | 0.24 |
| 221 | ವರಾಹಿ ಹೆಚ್.ಇ ಪಿಕಪ್ | ಕೆ.ಪಿ.ಸಿ.ಎಲ್ | 1989 | 2.92 |
| 222 | ವಿಷ್ಣುಸಮುದ್ರಕೆರೆ | ಸ.ನೀ | 1886 | 0.71 |
| 223 | ವಾಟೇಹೊಳೆ ಅಣೆಕಟ್ಟು | ಜಸಂಇ | 1984 | 1.51 |
| 224 | ವೈ.ಊರಮುಂದಿನ ಕೆರೆ | ಸ.ನೀ | 1910 | 0.07 |
| 225 | ಯಗಚಿ ಅಣೆಕಟ್ಟು | ಜಸಂಇ | 2003 | 3.60 |
| 226 | ಯಲ್ಲಮ್ಮವಾಡಿ ಕೆರೆ | ಸ.ನೀ | 1990 | 0.05 |
| 227 | ಯಳ್ಳೂರು ಕೆರೆ | ಸ.ನೀ | 1965 | 0.01 |
| 228 | ಯರಝುರ್ವಿ ಕೆರೆ | ಸ.ನೀ | 1969 | 0.05 |
| 229 | ಯರಕಸಂದ್ರ ಕೆರೆ | ಸ.ನೀ | 1952 | 0.20 |
| 230 | ಲಕ್ಯಾ ಅಣೆಕಟ್ಟು | ಕೆ.ಐ.ಒ.ಸಿ.ಎಲ್ | 1977 | 8.65 |
| 231 | ತುಂಗಭದ್ರಾ ಅಣೆಕಟ್ಟು | ಜಸಂಇ | 1953 | 100.88 |

ಅನುಬಂಧ - 2

## DETAILS OF SILTING IN VARIOUS RESERVOIRS IN THE STATE OF KARNATAKA

| Sl. No | Name of Reservoir | FRL (m) | Resevoir Area at FRL (SqKM) | Hydrographic Survey | | | | | | |
|---|---|---|---|---|---|---|---|---|---|---|
| | | | | Year of survey | Live storage (MCum) | Dead storage (MCum) | Gross storage (MCum) | Gross storage (TMC) | Accumilated Silt (TMC) | Remarks |
| 1 | 2 | 3 | 4 | 5 | 6 | 7 | 8 | | 9 | 11 |
| 1 | Tungabhadra | 497.738 | 378 | **1953** | **3718.340** | **32.830** | **3751.170** | **132.473** | **0.000** | **Pre impoundment surv** |
| | | | | 2008 | 2855.887 | 0.000 | 2855.887 | 100.856 | 31.617 | |
| 2 | Malaprabha | 633.80 | 135.83 | **1972** | **971.526** | **96.865** | **1068.391** | **37.730** | **0.000** | **Pre impoundment dat** |
| | | | | 2022 | 946.77 | 90.784 | 1037.561 | 36.641 | 1.089 | |
| 3 | Bhadra | 657.750 | 117.301 | **1964** | **1785.150** | **240.720** | **2025.870** | **71.544** | **0.000** | **Pre impoundment surv** |
| | | | | 2020 | 1768.468 | 235.670 | 2004.138 | 70.776 | 0.767 | |
| 4 | Ghataprabha / Hidkal | 662.94 | 78.039 | **1974** | **1307.827** | **126.310** | **1434.136** | **50.647** | **0.000** | |
| | | | | 2019 | 1202.626 | 90.435 | 1293.058 | 45.664 | 4.982 | |
| 5 | Almatti | 519.6 | 493.475 | **2001** | **2986.000** | **500.000** | **3486.000** | **123.108** | **0.000** | **Pre impoundment surv** |
| | | | | 2023 | 3000.667 | 271.377 | 3272.044 | 115.552 | 7.556 | |
| 6 | Hippargi | 524.87 | 29.915 | **1998** | **68.351** | **31.387** | **99.738** | **3.522** | **0.000** | **Pre impoundment surv** |
| | | | | 2007 | 66.996 | 29.172 | 96.168 | 3.396 | 0.126 | |
| 7 | NARAYANAPURA/ BASAVASAGARA | 492.25 | 132.06 | **1982** | **868.550** | **203.000** | **1071.550** | **37.842** | **0.000** | **Pre impoundment surv** |
| | | | | 2022 | 754.361 | 18.459 | 772.820 | 27.292 | 10.550 | |
| 8 | K.R. SAGARA | 752.49 | 131 | **1932** | **1275.690** | **124.620** | **1400.310** | **49.452** | **0.000** | **Pre impoundment surv** |
| | | | | 2022 | 1243.886 | 99.101 | 1342.987 | 47.428 | 2.024 | |
| 9 | KABINI | 696.16 | 61.342 | **1974** | **443.630** | **109.000** | **552.630** | **19.516** | **0.000** | **Pre impoundment surve** |
| | | | | 2022 | 445.021 | 78.162 | 523.183 | 18.476 | 1.040 | |
| 10 | HARANGI | 871.42 | 19.1 | **1982** | **228.591** | **12.100** | **240.691** | **8.500** | **0.000** | **Pre impoundment surve** |
| | | | | 2019 | 200.278 | 5.420 | 205.698 | 7.264 | 1.236 | |
| 11 | HEMAVATHY | 890.63 | 91.62 | **1979** | **1012.600** | **38.030** | **1050.630** | **37.103** | **0.000** | **Pre impoundment surve** |
| | | | | 2009 | 920.810 | 53.690 | 974.500 | 34.414 | 2.689 | |
| 12 | VANI VILASA SAGARA | 652.28 | 87.63 | **1901** | **802.5** | **47.8** | **850.3** | **30.028** | **0.000** | **Pre impoundment surve** |
| | | | | 2022 | 802.125 | 31.702 | 833.827 | .29.447 | 0.582 | |
| 13 | VOTEHOLE | 966.050 | 5.259 | **1985** | **38.700** | **4.050** | **42.750** | **1.510** | **0.000** | **Pre impoundment surve** |
| | | | | 2011 | 33.724 | 2.370 | 36.094 | 1.275 | 0.235 | |
| 14 | MARCONAHALLI | 731.570 | 13.418 | **1938** | **64.000** | **4.000** | **68.000** | **2.401** | **0.000** | **Pre impoundment surve** |
| | | | | 2011 | 61.930 | 2.213 | 64.143 | 2.265 | 0.136 | |

Director (Chief Engineer).
Karnataka Engineering Research Station.
Krishnarajasagara